ರವಾನೆ ಸಂಖ್ಯೆ: 159(B) /2023 ದಿನಾಂಕ: **09/02/2023**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ ಕೆ.ಆರ್.ನಗರ**

**ಉಲ್ಲೇಖ:** 1. ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು ಇವರ ಪತ್ರ ಸಂಖ್ಯೆ ಆಡಳಿತ/ಆ/20581/2021 ದಿನಾಂಕ 16/11/2021.

## ಟೆಂಡರ್ ಪ್ರಕಟಣೆ

ಕೆ.ಆರ್.ನಗರ ನ್ಯಾಯಾಲಯದ ಆವರಣದಲ್ಲಿ ವಕೀಲರು, ಕಕ್ಷಿದಾರರು ಮತ್ತು ನ್ಯಾಯಾಲಯ ಸಿಬ್ಬಂದಿ ವರ್ಗದವರವರ ಉಪಯೋಗಕ್ಕಾಗಿ ದಿನಾಂಕ 15-04-2023 ರಿಂದ 15/04/2025 ರ 2 ವರ್ಷದ ಅವಧಿಗೆ ಉಪಹಾರ ಗೃಹ ನಡೆಸಲು ಆಸಕ್ತ ವ್ಯಕ್ತಿಗಳಿಂದ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ. ಉಪಹಾರಗೃಹವನ್ನು ನಡೆಸಲು ಕೆಳಕಂಡ ನಿಬಂಧನೆಗಳು ಮತ್ತು ಗೌರವಾನ್ವಿತ ಉಚ್ಛ ನ್ಯಾಯಾಲಯದ ದಿನಾಂಕ 13.06.2005 ರ ಸಾಮಾನ್ಯ ಸುತ್ತೋಲೆ ಸಂಖ್ಯೆ:01/2005 ರ ನಿಬಂಧನೆಗಳಿಗೂ ಒಳಪಟ್ಟಂತೆ, ಪಿ.ಡಬ್ಲ್ಯೂ.ಡಿ ಇಲಾಖೆ, ಕೆ.ಆರ್.ನಗರ ರವರು ನಿಗಧಿಪಡಿಸಿರುವ ಮಾಸಿಕ ಕನಿಷ್ಟ ಬಾಡಿಗೆ ರೂ.7,600/- (ಏಳು ಸಾವಿರದ ಆರು ನೂರು ಮಾತ್ರ) ಹಾಗೂ ಭದ್ರತಾ ಠೇವಣಿ ರೂ. 10,000 /- (ಹತ್ತು ಸಾವಿರ)ಗಳನ್ನು, ನಿಗಧಿಪಡಿಸಲಾಗಿದ್ದು, ಅದರನ್ವಯ ಆಸಕ್ತವುಳ್ಳ ಹಾಗೂ ಅನುಭವವುಳ್ಳ ಅರ್ಜಿದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅದರಂತೆ ಗರಿಷ್ಟ ಮಾಸಿಕ ಬಾಡಿಗೆಯನ್ನು ದಾಖಲಿಸುವ ಅರ್ಜಿದಾರರಿಗೆ ಈ ಕೆಳಗಂಡ ನಿಬಂಧನೆಗಳನ್ವಯ ಪರವಾನಗೆಯನ್ನು ನೀಡಲಾಗುತ್ತದೆ .

1. ಆಯ್ಕೆಯಾದ ಪರವಾನಿಗೆದಾರರು ಹಿರಿಯ ಸಿವಿಲ್ ನ್ಯಾಯಾಧೀಶರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಗಿದ್ದು, ಒಪ್ಪಂದದ ನಿಬಂಧನೆಗಳಿಗೆ ಒಳಪಡತಕ್ಕದ್ದು ಮತ್ತು ಗೌರವಾನ್ವಿತ ಉಚ್ಛ ನ್ಯಾಯಾಲಯವು ಕಾಲಕಾಲಕ್ಕೆ ನೀಡುವ ನಿಬಂಧನೆಗಳಿಗೂ ಒಳಪಡತಕ್ಕದ್ದು.

2. ಪರವಾನಿಗೆದಾರರು, ಉಪಹಾರಗೃಹದ ಸಂಕೀರ್ಣವನ್ನು ಸ್ವಚ್ಛ ಹಾಗೂ ಶುದ್ಧವಾಗಿ ಇರಿಸಿಕೊಳ್ಳತಕ್ಕದ್ದು.

3. ಪರವಾನಿಗೆದಾರರು, ನೀಡಲಾದ ಜಾಗದಲ್ಲಿ ಅವರೇ ಸ್ವತಃ ಉಪಹಾರಗೃಹವನ್ನು ನಡೆಸತಕ್ಕದ್ದು.

4. ಪರವಾನಿಗೆದಾರರು, ಉಪಹಾರಗೃಹವನ್ನು ಮಾತ್ರ ನಡೆಸತಕ್ಕದ್ದೇ ಹೊರತು, ಬೇರೆ ವ್ಯವಹಾರ ಮಾಡತಕ್ಕದ್ದಲ್ಲ. ಒಂದು ವೇಳೆ ಹಾಗೆ ನಡೆದುಕೊಂಡಲ್ಲಿ, ಪರವಾನಿಗೆಯನ್ನು ರದ್ದುಗೊಳಿಸಲಾಗುವುದು.

5. ಪರವಾನಿಗೆದಾರರು, ಬೇರೆ ವ್ಯಕ್ತಿಗಳಿಗೆ ವ್ಯವಹಾರ ನಡೆಸಲು ಅವಕಾಶ ನೀಡತಕ್ಕದ್ದಲ್ಲ. ಒಂದು ವೇಳೆ ಹಾಗೆ ನಡೆದುಕೊಂಡಲ್ಲಿ, ಪರವಾನಿಗೆಯನ್ನು ರದ್ದುಗೊಳಿಸಲಾಗುವುದು.

6. ಪರವಾನಿಗೆದಾರರು, ವಿದ್ಯುಚ್ಛಕ್ತಿ ವೆಚ್ಚ, ನೀರಿನ ಬಿಲ್ಲು, ಸಂಪರ್ಕ ಮತ್ತು ಪುನರ್ ಸಂಪರ್ಕ ಹಾಗೂ ಒಳಚರಂಡಿ ಶುಲ್ಕವನ್ನು ಅವರೇ ಭರಿಸತಕ್ಕದ್ದು.

7. ಪರವಾನಿಗೆದಾರರು, ಬೆಳಗ್ಗೆ 07.00 ಘಂಟೆಯಿಂದ, ಸಂಜೆ 06.30 ಘಂಟೆಯವರೆಗೆ ಮಾತ್ರ ವ್ಯವಹಾರ ನಡೆಸತಕ್ಕದ್ದು.

8. ಉಪಹಾರಗೃಹದ ಕಟ್ಟಡದಲ್ಲಿ ಪೂರ್ವಾನುಮತಿಯನ್ನು ಪಡೆಯದೇ ಯಾವುದೇ ಬದಲಾವಣೆ, ನಿರ್ಮಾಣ ಮಾಡತಕ್ಕದ್ದಲ್ಲ. ತಪ್ಪಿದ್ದಲ್ಲಿ, ಪರವಾನಿಗೆ ರದ್ದುಗೊಳಿಸಲಾಗುವುದು ಮತ್ತು ಪರವಾನಿಗೆದಾರರೇ ಹಾನಿಯಾದ ವೆಚ್ಚವನ್ನು ಭರಿಸತಕ್ಕದ್ದು.

9. ಪರವಾನಿಗೆದಾರರು, ನೀಡಲಾದ ಜಾಗವನ್ನು ಪರವಾನಿಗೆ ನೀಡಿದವರಿಗೆ ಬೇಕಾದಲ್ಲಿ ಪರವಾನಿಗೆಯ ಅವಧಿ ಮುಗಿಯುವದರೊಳಗೆ ಖಾಲಿ ಮಾಡತಕ್ಕದ್ದಲ್ಲ, ಅಥವಾ ನೋಟೀಸು ನೀಡಿದ 15 ದಿವಸಗಳೊಳಗೆ ಖಾಲಿ ಮಾಡತಕ್ಕದ್ದು ಹಾಗೂ ಪರವಾನಿಗೆದಾರರಿಗೆ ಯಾವುದೇ ಪರಿಹಾರ ನೀಡಲಾಗುವುದಿಲ್ಲ.

10. ಪರವಾನಿಗೆದಾರರು, ಕಕ್ಷಿದಾರರಿಗೆ ಹಾಗೂ ವಾಹನಗಳ ನಿಲುಗಡೆಗೆ ತೊಂದರೆ ನೀಡತಕ್ಕದ್ದಲ್ಲ. ಪರವಾನಿಗೆದಾರರು ನಗರಪಾಲಿಕೆಯಿಂದ ಯಾವುದೇ ಪರವಾನಿಗೆ ಬೇಕಾದಲ್ಲಿ ಪಡೆದು, ಅದನ್ನು ಪ್ರದರ್ಶಿಸತಕ್ಕದ್ದು.

11. ಪರವಾನಿಗೆದಾರರು, ವ್ಯಕ್ತಿಗಳಿಗೆ ಹಾಗೂ ಆಸ್ತಿಗಳಿಗೆ ಹಾನಿಯಾಗುವಂತಹ ಯಾವುದೇ ವಸ್ತುಗಳನ್ನು ಸಂಗ್ರಹಿಸತಕ್ಕದ್ದಲ್ಲ.

12. ಭದ್ರತಾ ಶುಲ್ಕವನ್ನು ಯಾವುದೇ ಬಡ್ಡಿಯಿಲ್ಲದೇ ನೀರಿನ ಬಿಲ್ಲು, ವಿದ್ಯುತ್ ಬಿಲ್ಲು ಇನ್ನಾವುದೇ ಮೊತ್ತವನ್ನು ಕಡಿತಗೊಳಿಸಿ, ಪರವಾನಿಗೆ ಅವಧಿ ಮುಗಿದ ನಂತರ ಹಿಂದಿರುಗಿಸಲಾಗುವುದು (ಉತ್ತಮ ಸ್ಥಿತಿಯಲ್ಲಿ ಆವರಣವನ್ನು ಖಾಲಿ ಮಾಡುವ ನಿಬಂಧನಗೆ ಒಳಪಟ್ಟು)

13. ಪರವಾನಿಗೆಯನ್ನು ಅಂಗೀಕರಿಸುವ ಹಾಗೂ ರದ್ದುಗೊಳಿಸುವ ಅಧಿಕಾರವನ್ನು ಹಿರಿಯ ಸಿವಿಲ್ ನ್ಯಾಯಾಧೀಶರು ಹೊಂದಿರುತ್ತಾರೆ.

14. ಟೆಂಡರುಗಳನ್ನು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಟೆಂಡರುದಾರರ ಸಮ್ಮುಖದಲ್ಲಿ ದಿನಾಂಕ 06/04/2023 ರ ಅಪರಾಹ್ನ 02.30 ಘಂಟೆಗೆ ತೆರೆಯಲಾಗುವುದು.

15. ಯಶಸ್ವಿ ಟೆಂಡರುದಾರರು ಒಂದು ವಾರದ ಒಳಗೆ ಉಪಹಾರ ಗೃಹದ ಭದ್ರತಾ ಠೇವಣಿಯನ್ನು ಮುಂಗಡವಾಗಿ ಪಾವತಿಸಿ, ಕರಾರು ಪತ್ರವನ್ನು ಮಾಡಿಕೊಂಡು ದಿನಾಂಕ 15/04/2023 ರಿಂದ 15/03/2025 ರವರೆಗೆ (2 ವರ್ಷಗಳ ಅವಧಿಗೆ) ಉಪಹಾರ ಗೃಹವನ್ನು ನಡೆಸಬೇಕಾಗಿರುತ್ತದೆ. ತಪ್ಪಿದ್ದಲ್ಲಿ, ಟೆಂಡರನ್ನು ರದ್ದುಗೊಳಿಸಿ ಸಂಚಕಾರ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

16. ಉಪಹಾರ ಗೃಹವನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಬಂಧಪಟ್ಟ ಇಲಾಖೆಯವರಿಂದ ಲೈಸೆನ್ಸ್ ನ್ನು ಸ್ವಂತ ಹೆಸರಿನಲ್ಲಿ ಹೊಂದಿರತಕ್ಕದ್ದು.

17. ಕರ್ನಾಟಕ ಸರ್ಕಾರದ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದವರು ಹೊರಡಿಸಿದ ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಹೋಗತಕ್ಕದ್ದು ಹಾಗೂ ಉಪಹಾರ ಗೃಹದಲ್ಲಿ ಕೆಲಸ ನಿರ್ವಹಿಸುವ ವ್ಯಕ್ತಿಗಳು ಕೋವಿಡ್ ನ 2 ಲಸಿಕೆಗಳನ್ನು ಪಡೆದಿರತಕ್ಕದ್ದು.

18. ಅರ್ಜಿಗಳನ್ನು ಸಲ್ಲಿಸಲು ಆರಂಭಿಸುವ ದಿನಾಂಕಃ 06-03-2023.

19. ದಿನಾಂಕಃ 05-04-2023 ರ ಸಾಯಂಕಾಲ 05.00 ಘಂಟೆಯೊಳಗೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

20. https://districts.ecourts.gov.in/mysuru ನಲ್ಲಿ ಲಾಗಿನ್ ಆಗಿ ನೋಡಬಹುದು.

3/2/23

(ಸುಜಾತ ಎಂ ಸಾಂಬ್ರಾಣಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ಪ್ರಾ., ಕೆ.ಆರ್.ನಗರ.

Senior Civil Judge & J.M.F.C
K.R.NAGAR

**ಪ್ರತಿಯನ್ನು:**

1. ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಮೈಸೂರು ರವರ ಅನುಮತಿಗಾಗಿ
2. ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಮೈಸೂರು.
3. ಸಾಫ್ಟವೇರ್ ಟೆಕ್ನೀಷಿಯನ್, ಕಂಪ್ಯೂಟರ ವಿಭಾಗ, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಮೈಸೂರು, ಇವರಿಗೆ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.
4. ಉಪನಿರ್ದೇಶಕರು, ವಾರ್ತಾ ಭವನ, ಸಾರ್ವಜನಿಕ ಸಂಪರ್ಕ ಇಲಾಖೆ, ಧನ್ವಂತರಿ ರಸ್ತೆ, ಮೈಸೂರು, ಇವರಿಗೆ ಪತ್ರಿಕೆ ಪ್ರಕಟಣೆಗಾಗಿ.
5. ಅಧ್ಯಕ್ಷರು, ವಕೀಲರ ಸಂಘ, ಕೆ.ಆರ್.ನಗರ.
6. ತಾಲ್ಲೂಕು ತಹಶೀಲ್ದಾರರವರ ಕಛೇರಿ, ಕೆ ಆರ್ ನಗರ.
7. ಮುಖ್ಯಾಧಿಕಾರಿಗಳು, ಪುರಸಭೆ ಕೆ ಆರ್ ನಗರ.
8. ಮುಖ್ಯಾಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಕೆ.ಆರ್.ನಗರ.
9. ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿ, ಕೆ.ಆರ್.ನಗರ.
10. ಶಿರಸ್ತೇದಾರರು, ಲೆಕ್ಕಪತ್ರಗಳ ವಿಭಾಗ, ಹಿರಿಯ ಸಿವಿಲ್ ನ್ಯಾಯಾಲಯ, ಕೆ.ಆರ್.ನಗರ.
11. ಇತರೆ ನ್ಯಾಯಾಲಯಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು (ಎರಡು ನ್ಯಾಯಾಲಯಗಳು)
12. ಈ ಕಛೇರಿಯ ಸೂಚನಾ ಫಲಕ
13. ಕ್ಯಾಂಟಿನ್ ಕಡತ
14. ಕೆ ಆರ್ ನಗರದ ಸಾರ್ವಜನಿಕ ಸ್ಥಳಗಳಲ್ಲಿ.